ಅನುಬಂಧ-ಆ

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು-46

ರೇಷ್ಮೆ ಉತ್ಪಾದನಾ ಕೇಂದ್ರಗಳ ಪಟ್ಟಿ ಮತ್ತು ಪ್ರತಿ ತಿಂಗಳ ಉತ್ಪಾದನೆ

ಕ್ರಮ ಸಂಖ್ಯೆ	ಉತ್ಪಾದನಾ ಕೇಂದ್ರಗಳ ಹೆಸರು	ಪ್ರತಿ ತಿಂಗಳ ಸರಾಸರಿ ಉತ್ಪಾದನೆ ಮೀಟರುಗಳಲ್ಲಿ
1.	ಎಸ್.ಆರ್.ನಗರ	3,500
2.	ಕುಡೂರು	845
3.	ತ್ಯಾಮಗೊಂಡಲು	1,300
4.	ರಾಜಾಜಿನಗರ	2,600
5.	ಚಿಂತಾಮಣಿ	1,800
6.	ಕಲ್ಲೂರು	11,000
7.	ಚೀಳೂರು	2,850
8.	ಆನೇಕಲ್	8,000
9.	ದೊಮ್ಮಸಂದ್ರ	200
10.	ತಿಪಟೂರು	10,000
11.	ಚಿಕ್ಕನಾಯಕನಹಳ್ಳಿ	3,000
12.	ತುರುವೇಕೆರೆ	1,200
13.	ಮೊಳಕಾಲ್ಮೂರು	1,700
14.	ಕೊಂಡ್ಲಹಳ್ಳಿ	700
15.	ದೊಡ್ಡಉಲರಟಿ	250
16.	ಕೊಳ್ಳೇಗಾಲ	2,870
17.	ಹೊಸಹೊಳಲು	3,990
18.	ಕಿಕೇರಿ	1,890
19.	ಮೇಲ್‌ಕೋಟೆ	4,340
20.	ಹಸುರ್	250
21.	ಕೋಲಾರ	560
22.	ಇಲ್‌ಕಲ್	620

ಪೆಟ್ರೋಲ್ ಮತ್ತು ಡೀಸಲ್ ಉಳಿತಾಯ

181 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಲ್ಲಿಯುದ್ಧದ ಪ್ರಯುಕ್ತ ಪೆಟ್ರೋಲ್ ಮತ್ತು ಡೀಸಲ್ ಉಳಿತಾಯ ಮಾಡುವ ಬಗ್ಗೆ ಸರ್ಕಾರಕ್ಕೆ ತಿಳಿದಿದೆಯಾ?

ಅ) ಹಾಗಿದ್ದಲ್ಲಿ, ಸರ್ಕಾರಿ ವಾಹನಗಳ ಇಂಧನದ ಉಳಿತಾಯದ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಹೌದು

ಆ) ಪೆಟ್ರೋಲ್ ಮತ್ತು ತೈಲವನ್ನು ಉಳಿಸಿಕೊಳ್ಳುವಲ್ಲಿ ರಾಜ್ಯ ಸರ್ಕಾರವು ಸರ್ಕಾರಿ ವಾಹನಗಳ ಬಳಕೆಯನ್ನು ಕ್ರಮಬದ್ಧಗೊಳಿಸಲು ಕ್ರಮಗಳನ್ನು ಸೂಚಿಸಿದೆ:-

1) ಸರ್ಕಾರವು ಕಾರ್ಯದರ್ಶಿಗಳಿಗೆ ಹಾಗೂ ಇಲಾಖಾ ಮುಖ್ಯಸ್ಥರಿಗೆ ಮಾತ್ರ ಒಬ್ಬ ಸರ್ಕಾರಿ ಚಾಲಕನಿರುವ ಒಂದು ನಾಮ ನಿರ್ದಿಷ್ಟ ಸರ್ಕಾರಿ ವಾಹನವಿರುತ್ತದೆ. ಹೆಚ್ಚಿನ ವಾಹನಗಳನ್ನು ಮೊದಲು ಅತಿಥೇಯ ಸಂಸ್ಥೆಗೆ ವರ್ಗಾಯಿಸಬೇಕು.

ಹೊಸ ವಾಹನಗಳನ್ನು ಖರೀದಿಸುವ ವಿಷಯದಲ್ಲಿ ಸ್ಥಾಯಿ ಉಪಸಮಿತಿಯ ಶಿಫಾರಸ್ಸು ಮಾಡದ ಹೊರತು ಖರೀದಿ ಮಾಡತಕ್ಕದಲ್ಲ.

2)ನಾಮ ನಿರ್ದಿಷ್ಟ ವಾಹನಗಳನ್ನು ಪಡೆದಿರುವ ಅಧಿಕಾರಿಗಳು ತಮ್ಮ ಪ್ರಯಾಣಕ್ಕಾಗಿ ನಾಮ ನಿರ್ದಿಷ್ಟ ವಾಹನಗಳನ್ನು ಬಳಸಲು ಅನುಮತಿಸಲಾಗಿದೆ. ಹಾಗೂ ಅನಾವಶ್ಯಕ ಪೆಟ್ರೋಲ್ ವ್ಯಯವನ್ನು ತಪ್ಪಿಸುವ ಸಲುವಾಗಿ ಪ್ರತಿದಿನ ಸಂಜೆ ಮತ್ತು ಬೆಳಿಗ್ಗೆ ವಾಹನ ನಿಲುಗಡೆಗಾಗಿ ಸರ್ಕಾರದ ಗ್ಯಾರೇಜಿಗೆ ವಾಹನಗಳನ್ನು ಕೊಂಡೊಯ್ಯುವ ಬದಲು ಅಧಿಕಾರಿಗಳು ವಾಹನಗಳನ್ನು ಇನ್ನು ಮುಂದೆ ತಮ್ಮ ನಿವಾಸದಲ್ಲಿಯೇ ಉಳಿಸಿಕೊಳ್ಳಲು ಅನುಮತಿಸಲಾಗಿದೆ.

3) ರಾಜ್ಯ ಕೇಂದ್ರ ಸ್ಥಾನದಿಂದ ದೂರದ ಜಿಲ್ಲೆಗಳಿಗೆ ಅದರಲ್ಲೂ ವಿಶೇಷವಾಗಿ ರೈಲು :ಬಸ್ಸು ಮೂಲಕವೇ ಮಾಡಬಹುದಾದ ದೂರದ ಪ್ರವಾಸಕ್ಕಾಗಿ ವಾಹನವನ್ನು ಬಳಸಬಾರದೆಂದು ನಿರ್ದೇಶಿಸಲಾಗಿದೆ.

4) ಇಲಾಖಾ ಮುಖ್ಯಸ್ಥರ ಆಡಳಿತ ನಿಯಂತ್ರಣದಲ್ಲಿ ಬರುವ ಅಧಿಕಾರಿಗಳು ಕೇಂದ್ರ ಕಛೇರಿಯಿಂದಾಚೆ ಕೈಗೊಳ್ಳುವ ಪ್ರವಾಸಗಳಿಗಾಗಿ, ಕಛೇರಿ ಬಳಕೆಗಾಗಿಯೇ ಇರುವ ಕಾರನ್ನು ಬಳಸುವುದಕ್ಕಾಗಿ ಇಲಾಖಾ ಮುಖ್ಯಸ್ಥರ ಅನುಮತಿಯನ್ನು ಪಡೆದಿರಬೇಕೆಂದು ಇಲಾಖಾ ಮುಖ್ಯಸ್ಥರಿಗೆ ಸೂಚನೆ ನೀಡಲಾಗಿದೆ. ಸಾಮಾನ್ಯವಾಗಿ ಇಂತಹ ಅನುಮತಿಯನ್ನು ನೀಡಲಾಗುವುದಿಲ್ಲ. ವಿಶೇಷವಾಗಿ ಇಂತಹ ಅಧಿಕಾರಿಗಳು ಜಿಲ್ಲಾ ಕೇಂದ್ರ ಸ್ಥಾನಕ್ಕೆ ಭೇಟಿ ನೀಡಿದಾಗ ಕೂಡ ಅಲ್ಲಿರುವ ಇಲಾಖೆಯ ವಾಹನವನ್ನು ಉಪಯೋಗಿಸಬಹುದು.

5) ಜಿಲ್ಲಾಧಿಕಾರಿಗಳು : ಜಿಲ್ಲಾ ಪರಿಷತ್ತುಗಳ ಮುಖ್ಯ ಕಾರ್ಯದರ್ಶಿಗಳು ಮತ್ತು ಅವರ ಸಿಬ್ಬಂದಿ ಅಥವಾ ಅಧೀನ ಅಧಿಕಾರಿಗಳು ಸಭೆಗಳೂ ಇತ್ಯಾದಿಗಳಿಗೆ ಹಾಜರಾಗುವ ಸಲುವಾಗಿ ರಾಜ್ಯ ಕೇಂದ್ರ ಸ್ಥಾನಕ್ಕೆ ಬರಲು ಸರ್ಕಾರಿ ವಾನಗಳನ್ನು ಬಳಸುವ ಬದಲಾಗಿ ರೈಲನ್ನು ಬಳಸಬೇಕೆಂದು ಆದೇಶಿಸಲಾಗಿದೆ.

ಮೇಲ್ಕಂಡ ಅಧಿಕಾರಿಗಳು ಅಧಿಕೃತ ಕೆಲಸದ ಮೇಲೆ ಬೆಂಗಳೂರಿಗೆ ಬಂದಾಗ ಅವರುಗಳ ಉಪಯೋಗಕ್ಕಾಗಿ ನಿಗಧಿತ 5 ಸಮೂಹ ವಾಹನಗಳನ್ನು ರಾಜ್ಯ ಅತಿಥೇಯ ಸಂಸ್ಥೆಯಿಂದ ಭದಗಿಸಲಾಗಿರುವುದನ್ನು ಉಪಯೋಗಿಸಬಹುದು.

6) ಅತಿ ತುರ್ತು ಸಂದರ್ಭಗಳನ್ನು ಹೊರತು ಪಡಿಸಿ ಸಚಿವರುಗಳು ಮತ್ತು ಸರ್ಕಾರದ ಅಧಿಕಾರಿಗಳು ಸಾಮಾನ್ಯವಾಗಿ ಭಾನುವಾರಗಳಂದು ಸರ್ಕಾರಿ ವಾಹನಗಳನ್ನು ಉಪಯೋಗಿಸುವುದಿಲ್ಲ.